ನೋಡಿದರೆ ಮೈಸೂರಿನವರಿಗೆ ಇದರಲ್ಲಿ ಶಿಕ್ಷಣ ಪಡೆಯಲು ಅವಕಾಶಕೊಡಬೇಕೆಂದು ಅಗ್ರೀ ಮೆಂಟಿನಲ್ಲಿ ನಮೂದಿಸಲಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಅಗ್ರಿಮೆಂಟಿನಲ್ಲಿ ಆದನ್ನೇ ಒಂದು ಪ್ರತ್ಯೇಕವಾಗಿ ಮಾಡಿಲ್ಲ. ಆದರೆ ಮೈಸೂರಿನವರಿಗೆ ವಿಶೇಷ ರೀತಿಯಲ್ಲಿ ತರಬೇತಾಗಲು ಅವಕಾಶ ಕೊಡಬೇಕೆಂದು ಒಂದು ಏರ್ಪಾಡನ್ನು ಮಾಡಲಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಕೊಡಲೇ ಬೇಕೆಂಬ ಒತ್ತಾಯವನ್ನು ಮೈಸೂರಿನವರು ಹಾಕಲು ಅಗ್ರೀಮೆಂಟಿನಲ್ಲಿ ಆ ಬಗ್ಗೆ ಏನ ನ್ನಾದರೂ ನಮೂದಿಸಲಾಗಿರುತ್ತದೆಯೇ?

Sri T. SIDDALINGAIYA.—After integration of services, certain rules have been framed. According to our rules, Mysoreans will also get their best chance.

Supply of Electricity to Sadalu from Chintamani.

Q.—503. Sri G. PAPANNA (Sidlaghatta-Chickballapur).—

Will the Gevernment be pleased to state.—

(*a*) whether the estimate for supplying electricity to Sadalu from Chintamani has been sanctioned ;

(*b*) if so, the reason for not commencing the work ?

A.— Sri T. SIDDALINGAIYA (Minister for Industries).—

(*a*) Yes.

(*b*) Due to the necessity of revising the sanctioned estimate and the low return not yielding even the interest charges on the capital outlay.

*ಶ್ರೀ ಜಿ. ಪಾಪಣ್ಣ.—ಚಿಂತಾಮಣಿಯಿಂದ ಸಾದಲಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಲು ಜನರು ಅನೇಕ ಅರ್ಜಿಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಕೊಟ್ಟಿರ ಬಹುದು.

ಶ್ರೀ ಜಿ. ಪಾಪಣ್ಣ.—ತಾವು (ಎ) ಪ್ರಶ್ನೆಗೆ ಒದಗಿಸಿರುವ ಉತ್ತರಕ್ಕೂ ಮತ್ತು (ಬಿ) ಪ್ರಶ್ನೆಯ ಉತ್ತರಕ್ಕೂ ಸರಿಹೊಂದುವುದಿಲ್ಲ ವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಇಲ್ಲಿ ಈಗ ಕೆಲಸ ಪ್ರಾರಂಭವಾಗಿದೆ. ಹಿಂದೆ ಇದ್ದ ಕೆಲಸದ ಸ್ಟೇಜ್ ಏನಿತ್ತೋ ಆದನ್ನು ಉತ್ತರದಲ್ಲಿ ಕೊಡಲಾಗಿದೆ. ಆದರೆ ಈಗ ನಾನು ಮಾನ್ಯ ಸದಸ್ಯರ ಅವಗಾಹನೆಗೆ ಇತ್ತೀಚೆಗೆ ಆಗಿರತಕ್ಕ ಕೆಲಸದ ಸ್ಟೇಜನ್ನು ತಂದಿದ್ದೇನೆ.

Electric pumps to wells in Sivagange, Dobbspet, etc.

Q.—529. Sri D. M. GOVINDA RAJU (Nelamangala).—

Will the Government be pleased to state.—

(*a*) whether any applications have been received from the people of the surrounding villages of Sivagange, Dobbspet and Thyamagondlu in Nelamangala Taluk, Bangalore District, to provide electric pumps to wells for irrigation purposes ;

(*b*) the number of applications received and from whom ;

(*c*) whether any endorsements have been issued to the petitioners ;

(*d*) whether steps would be taken to provide the irrigation pumps early ?

A.—Sri T. SIDDALINGAIYA (Minister for Industries).—

(*a*) Yes.

(*b*) Only one from Sri D. M. Govinda Raju.

(*c*) Yes.

(*d*) Yes.

ಶ್ರೀ ಡಿ. ಎಂ. ಗೋವಿಂದರಾಜು.—ಈ ಸಂಬಂಧವಾಗಿ ಎಸ್ಟಿಮೇಟುಗಳೇನಾದರೂ ತಯಾರಾಗಿರುತ್ತವೆಯೇ ? ಕೆಲಸವನ್ನು ಪ್ರಾರಂಭಿಸಲು ಯಾವಾಗ ಸಾಧ್ಯವಾಗುತ್ತದೆ ?

*ಶ್ರೀ ಟಿ. ಸಿದ್ದಲಿಂಗಯ್ಯ.—ಈಗ ಉತ್ತರದಲ್ಲಿ ತಿಳಿಸಿರುವ ಪ್ರಕಾರ ಮೊದಲು ಯಾವ ಸ್ಥಳಗಳಿಗೆ ಕೊಡಬೇಕೆಂದು ನಿರ್ಧಾರಮಾಡಲಾಗಿದೆಯೋ ಆ ಸ್ಥಳಗಳಿಗೆಲ್ಲ ಒದಗಿಸಿದ ಮೇಲೆ ಬಾಕಿ ಹಳ್ಳಿಗಳಿಗೆ ಒದಗಿಸಲಾಗುತ್ತದೆ.